# ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು** : **ಶ್ರೀ ಕೇಶವ ಪ್ರಸಾದ್ ಎಸ್ (ವಿಧಾನಸಭೆಯಿಂದ ಚುನಾಯಿತರಾದವರು)**

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** : **291**

**ಉತ್ತರಿಸಬೇಕಾದ ದಿನಾಂಕ** : **18-08-2026**

**ಉತ್ತರಿಸಬೇಕಾದ ಸಚಿವರು** : **ಮಾನ್ಯ ಸಹಕಾರ ಸಚಿವರು**

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಸಹಕಾರ ಇಲಾಖೆಯಲ್ಲಿ ರೈತರಿಗಾಗಿ ಇರುವ ವಿವಿಧ ಸಾಲದ ಯೋಜನೆಗಳು ಯಾವುವು; (ಸಂಪೂರ್ಣ ಮಾಹಿತಿ ನೀಡುವುದು) | ಸಹಕಾರ ಇಲಾಖೆಯಿಂದ ಸಹಕಾರ ಸಂಘಗಳ ಮೂಲಕ ರೈತರಿಗೆ ಈ ಕೆಳಕಂಡ ಬಡ್ಡಿ ಸಹಾಯಧನ ಯೋಜನೆಯ ಸೌಲಭ್ಯಗಳನ್ನು ನೀಡಲಾಗುತ್ತಿದೆ.<br>1. ರೂ.5.00 ಲಕ್ಷಗಳವರೆಗಿನ ಅಲ್ಪಾವಧಿ ಬೆಳೆ ಸಾಲವನ್ನು ಮತ್ತು ರೂ. 2.00 ಲಕ್ಷಗಳವರೆಗೆ ಪಶು ಸಂಗೋಪನೆ / ಮೀನುಗಾರಿಕೆ ಉದ್ದೇಶಗಳಿಗೆ ದುಡಿಯುವ ಬಂಡವಾಳದ ಸಾಲವನ್ನು ಶೂನ್ಯ ಬಡ್ಡಿ ದರದಲ್ಲಿ ವಿತರಿಸುವ ಯೋಜನೆ.<br>2. ರೂ.15.00 ಲಕ್ಷಗಳವರೆಗೆ ಮಧ್ಯಮಾವಧಿ / ದೀರ್ಘಾವಧಿ ಕೃಷಿ ಸಾಲಗಳನ್ನು ಶೇಕಡ 3 ರ ಬಡ್ಡಿ ದರದಲ್ಲಿ ವಿತರಿಸುವ ಯೋಜನೆ.<br>ಸಂಪೂರ್ಣ ಮಾಹಿತಿಯನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ. |
| ಆ) | ಕಳೆದ 3 ವರ್ಷಗಳಿಂದ ಸಹಕಾರ ಇಲಾಖೆಯಡಿ ಬರುವ ಬ್ಯಾಂಕುಗಳಲ್ಲಿ ಮತ್ತು ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಗಳಲ್ಲಿ ಇಲ್ಲಿಯವರೆಗೆ ಸಾಲದ ಯೋಜನೆಯಡಿಯಲ್ಲಿ ರೈತರಿಗೆ ಎಷ್ಟು ಮೊತ್ತದ ಸಾಲವನ್ನು ನೀಡಲಾಗಿದೆ; (ಜಿಲ್ಲಾವಾರು ಮಾಹಿತಿ ನೀಡುವುದು) | ಕಳೆದ 3 ವರ್ಷಗಳಿಂದ ಸಹಕಾರ ಇಲಾಖೆಯಡಿ ಬರುವ ಬ್ಯಾಂಕುಗಳಲ್ಲಿ ಮತ್ತು ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಗಳಲ್ಲಿ ಇಲ್ಲಿಯವರೆಗೆ ರೈತರಿಗೆ ನೀಡಲಾದ ಸಾಲದ ಮೊತ್ತದ ವಿವರವನ್ನು **ಅನುಬಂಧ-2** ರಲ್ಲಿ ನೀಡಲಾಗಿದೆ. |
| ಇ) | ರಾಜ್ಯದ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು ಮತ್ತು ಖಾಲಿ ಇರುವ ಸಂಖ್ಯೆ ಎಷ್ಟು ; | ರಾಜ್ಯದ 21 ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳಲ್ಲಿ ಒಟ್ಟು ಮಂಜೂರಾದ 8686 ಹುದ್ದೆಗಳಲ್ಲಿ, 6653 ವಿವಿಧ ದರ್ಜೆಯ ಅಧಿಕಾರಿ/ಸಿಬ್ಬಂದಿಗಳು ಕಾರ್ಯ ನಿರ್ವಹಿಸುತ್ತಿದ್ದು, 2033 ವಿವಿಧ ದರ್ಜೆಯ ಹುದ್ದೆಗಳು ಖಾಲಿ ಇರುತ್ತವೆ. ಬ್ಯಾಂಕುವಾರು ವಿವರವನ್ನು **ಅನುಬಂಧ-3** ರಲ್ಲಿ ನೀಡಲಾಗಿದೆ. |

| | | |
|---|---|---|
| ಈ) | ಖಾಲಿ ಇರುವ ಸಿಬ್ಬಂದಿಗಳ ಕೊರತೆಯಿಂದ ರೈತರಿಗೆ ಮತ್ತು ಸಾರ್ವಜನಿಕರಿಗೆ ಪದೇ ಪದೇ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಖಾಲಿ ಇರುವ ಹುದ್ದೆಗಳನ್ನು ತುಂಬಿಕೊಳ್ಳಲು ಸರ್ಕಾರದ ಮುಂದಿನ ಕ್ರಮಗಳೇನು; ಮತ್ತು ಯಾವ ಕಾಲಮಿತಿಯೊಳಗೆ ಖಾಲಿ ಇರುವ ಹುದ್ದೆಗಳಿಗೆ ಸಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳಲಾಗುವುದು? (ಸಂಪೂರ್ಣ ಮಾಹಿತಿ ನೀಡುವುದು) | ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ರ ನಿಯಮ 17, 17ಎ ಹಾಗೂ 18 ರ ಅವಕಾಶ ಹಾಗೂ 30(ಬಿ) ನಿರ್ದೇಶನದ ರೀತ್ಯಾ ನೇಮಕ ಮಾಡಿಕೊಳ್ಳುವ ಅಧಿಕಾರವು ಬ್ಯಾಂಕುಗಳ ಆಡಳಿತ ಮಂಡಳಿಗೆ ದತ್ತವಾಗಿರುತ್ತದೆ.<br><br>ಜಿಲ್ಲಾ ಬ್ಯಾಂಕುಗಳು ತನ್ನ ಅಗತ್ಯತೆಗೆ ಅನುಗುಣವಾಗಿ ಅವಶ್ಯವಿರುವ ಸಿಬ್ಬಂದಿಗಳನ್ನು ನಬಾರ್ಡ್ ಮಾನವ ಸಂಪನ್ಮೂಲ ಮಾರ್ಗಸೂಚಿಗಳನ್ವಯ ಆಗಿಂದಾಗ್ಗೆ ನೇಮಕ ಮಾಡಿಕೊಳ್ಳಲಾಗುತ್ತಿದೆ. |

**ಕಡತ ಸಂಖ್ಯೆ: ಸಿಒ 242 ಸಿಎಲ್ಎಸ್ 2026**

**(ಲಕ್ಷ್ಮಣ ಎಸ್.ಸವದಿ)**
**ಸಹಕಾರ ಸಚಿವರು**

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ. ಕೇಶವ ಪ್ರಸಾದ ಎಸ್. ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 189 (291) ಕ್ಕೆ ಅನುಬಂಧ-1**

**ಸಹಕಾರ ಇಲಾಖೆಯಿಂದ ಸಹಕಾರ ಸಂಘಗಳ ಮೂಲಕ ರೈತರಿಗೆ ನೀಡುವ ಬಡ್ಡಿ ಸಹಾಯಧನದ ಯೋಜನೆಯ ಪ್ರಯೋಜನ ಪಡೆಯಲು ಇರುವ ಮಾನದಂಡಗಳ ವಿವರ**

1. **ರೂ. 5.00 ಲಕ್ಷಗಳವರೆಗಿನ ಅಲ್ಪಾವಧಿ ಬೆಳೆ ಸಾಲವನ್ನು ಮತ್ತು ರೂ.2.00 ಲಕ್ಷಗಳವರೆಗೆ ಪಶುಸಂಗೋಪನೆ/ಮೀನುಗಾರಿಕೆ ಉದ್ದೇಶಗಳಿಗೆ ದುಡಿಯುವ ಬಂಡವಾಳದ ಸಾಲವನ್ನು ಶೂನ್ಯ ಬಡ್ಡಿದರದಲ್ಲಿ ವಿತರಿಸುವ ಯೋಜನೆ**

1. ಈ ಯೋಜನೆಯಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು, ಲ್ಯಾಂಪ್ಸ್, ಪಿಕಾರ್ಡ್ ಬ್ಯಾಂಕುಗಳು ಹಾಗೂ ಡಿಸಿಸಿ ಬ್ಯಾಂಕುಗಳು ರೂ. 5.00 ಲಕ್ಷಗಳವರೆಗಿನ ಅಲ್ಪಾವಧಿ ಬೆಳೆ ಸಾಲವನ್ನು ಮತ್ತು ರೂ.2.00 ಲಕ್ಷಗಳವರೆಗೆ ಪಶುಸಂಗೋಪನೆ/ಮೀನುಗಾರಿಕೆ ಉದ್ದೇಶಗಳಿಗೆ ದುಡಿಯುವ ಬಂಡವಾಳದ ಸಾಲವನ್ನು ಶೂನ್ಯ ಬಡ್ಡಿದರ ಅನ್ವಯವಾಗುವಂತೆ ರೈತರಿಗೆ ವಿತರಿಸಬೇಕಿರುತ್ತದೆ.
2. ರೈತನ ಭೂಮಿ ಅಥವಾ ವಾಸ ಸ್ಥಳ ಇರುವ ಪ್ರಾಥಮಿಕ ಸಹಕಾರ ಸಂಘದಲ್ಲಿ ರೈತನು ಸಾಲಕ್ಕಾಗಿ ಅರ್ಜಿ ಸಲ್ಲಿಸಬೇಕು. ಸಂಘ ನಿಷ್ಕ್ರಿಯ ಆಗಿದ್ದಲ್ಲಿ ಸಂಬಂಧಿಸಿದ ಡಿಸಿಸಿ ಬ್ಯಾಂಕಿನಲ್ಲಿ ಅರ್ಜಿ ಸಲ್ಲಿಸಬೇಕು.
3. ರೈತನು ಸಾಲ ಪಡೆಯಲು ನೀಡುವ ಭೂ ದಾಖಲೆಗಳಲ್ಲಿ ಇತರೇ ಯಾವುದೇ ಬ್ಯಾಂಕಿನಿಂದ ಸಾಲ ಪಡೆದಿರಬಾರದು.
4. ಅಲ್ಪಾವಧಿ ಕೃಷಿ ಸಾಲ ವಿತರಿಸಲು ರೈತನು ಹೊಂದಿರುವ ಭೂಹಿಡುವಳಿಗೆ ಮತ್ತು ಬೆಳೆಯುವ ಬೆಳೆಗೆ, ರಾಜ್ಯ ತಾಂತ್ರಿಕ ಸಲಹಾ ಸಮಿತಿ ಪ್ರತೀ ಬೆಳೆಗೆ ನಿಗದಿಪಡಿಸಿದ ಸ್ಕೇಲ್ ಆಫ್ ಫೈನಾನ್ಸ್ ಪ್ರಕಾರ ಬೆಳೆ ಸಾಲದ ಗರಿಷ್ಠ ಮಿತಿಯಾದ ಕ್ರಮಿಕ ಪತ್ತಿನ ಮಿತಿ (NCL) ಗೆ ಸಂಬಂಧಿಸಿದ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕುಗಳಿಂದ ಅನುಮೋದನೆ ಪಡೆದಿರತಕ್ಕದ್ದು ಹಾಗೂ ಬೆಳೆ ವಿಮೆ ಒಳಗೊಂಡಂತೆ ಸದರಿ ಮಿತಿ ಅಥವಾ ರೂ.5.00 ಲಕ್ಷ ಯಾವುದು ಕಡಿಮೆಯೋ ಆ ಮಿತಿಗೆ ಮಾತ್ರ ಸಾಲ ದೊರೆಯುತ್ತದೆ.
5. ಸಂಘಗಳು ಹೆಚ್ಚಿನ ಪ್ರಮಾಣದ ಸಾಲ ವಿತರಿಸಿದ್ದರೂ ಸಹ ಶೂನ್ಯ ಬಡ್ಡಿ ದರ ರೂ.5 ಲಕ್ಷಗಳವರೆಗಿನ ಸಾಲಕ್ಕೆ ಅನ್ವಯವಾಗುತ್ತದೆ.
6. ರೈತನು ಪಡೆದ ಸಾಲವನ್ನು ಸಂಘವು ನಿಗದಿಪಡಿಸಿದ ಗಡುವು ದಿನಾಂಕ ಅಥವಾ ಒಂದು ವರ್ಷ ಇದರಲ್ಲಿ ಯಾವುದು ಕಡಿಮೆಯೋ ಆ ಅವಧಿಯಲ್ಲಿ ಮರುಪಾವತಿಸಿದಲ್ಲಿ ಮಾತ್ರ ಬಡ್ಡಿ ಸಹಾಯಧನ ಲಭ್ಯವಾಗುತ್ತದೆ.
7. ಜಿಲ್ಲಾ ಸಹಕಾರ ಬ್ಯಾಂಕುಗಳು ನಬಾರ್ಡ್ ನಿಂದ ದೊರೆಯುವ ಪುನರ್ಧನ ಮತ್ತು ತಮ್ಮ ಬಂಡವಾಳದ ಲಭ್ಯತೆ ಆಧರಿಸಿ ರೈತರಿಗೆ ಸಾಲ ಮಂಜೂರು ಮಾಡಲಾಗುತ್ತದೆ.

2. **15.00 ಲಕ್ಷಗಳವರೆಗೆ ಮಧ್ಯಮಾವಧಿ/ದೀರ್ಘಾವಧಿ ಕೃಷಿ ಸಾಲಗಳನ್ನು ಶೇಕಡ 3 ರ ಬಡ್ಡಿ ದರದಲ್ಲಿ ವಿತರಿಸುವ ಯೋಜನೆ.**

1. ಈ ಯೋಜನೆಯಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು, ಲ್ಯಾಂಪ್ಸ್, ಪಿಕಾರ್ಡ್ ಬ್ಯಾಂಕುಗಳು ಹಾಗೂ ಡಿಸಿಸಿ ಬ್ಯಾಂಕುಗಳು ರೂ. 15.00 ಲಕ್ಷಗಳವರೆಗಿನ ಮಧ್ಯಮಾವಧಿ ಹಾಗೂ ದೀರ್ಘಾವಧಿ ಕೃಷಿ ಸಾಲವನ್ನು ಶೇ.3 ರ ಬಡ್ಡಿದರ ಅನ್ವಯವಾಗುವಂತೆ ರೈತರಿಗೆ ವಿತರಿಸಬೇಕಿರುತ್ತದೆ.
2. ರೈತನ ಭೂಮಿ ಅಥವಾ ವಾಸ ಸ್ಥಳ ಇರುವ ಪ್ರಾಥಮಿಕ ಸಹಕಾರ ಸಂಘದಲ್ಲಿ ರೈತನು ಸಾಲಕ್ಕಾಗಿ ಅರ್ಜಿ ಸಲ್ಲಿಸಬೇಕು. ಸಂಘ ನಿಷ್ಕ್ರಿಯ ಆಗಿದ್ದಲ್ಲಿ ಸಂಬಂಧಿಸಿದ ಡಿಸಿಸಿ ಬ್ಯಾಂಕಿನಲ್ಲಿ ಅರ್ಜಿ ಸಲ್ಲಿಸಬೇಕು.
3. ರೈತನು ಸಾಲ ಪಡೆಯಲು ನೀಡುವ ಭೂ ದಾಖಲೆಗಳಲ್ಲಿ ಇತರೇ ಯಾವುದೇ ಬ್ಯಾಂಕಿನಿಂದ ಸಾಲ ಪಡೆದಿರಬಾರದು.
4. ಮಧ್ಯಮಾವಧಿ ಹಾಗೂ ದೀರ್ಘಾವಧಿ ಕೃಷಿ ಸಾಲ ವಿತರಿಸಲು ನಬಾರ್ಡ್ ನಿಗದಿಪಡಿಸಿದ ಯುನಿಟ್ ಕಾಸ್ಟ್ ಅನ್ವಯ ಮತ್ತು ಭದ್ರತೆಯ ಮೌಲ್ಯದನ್ವಯ ಸಾಲದ ಮಿತಿಯನ್ನು ನಿಗದಿಪಡಿಸಲಾಗುತ್ತದೆ ಮತ್ತು ಸಾಲಕ್ಕೆ ಡಿಸಿಸಿ ಬ್ಯಾಂಕುಗಳ ಸಾಲ ನಿಯಮಾವಳಿಗಳನ್ವಯ ಭದ್ರತೆ ಪಡೆಯಲಾಗುತ್ತದೆ.
5. ಸಂಘಗಳು ಹೆಚ್ಚಿನ ಪ್ರಮಾಣದ ಸಾಲ ವಿತರಿಸಿದ್ದರೂ ಸಹ ಶೇ.3 ರ ಬಡ್ಡಿ ದರ ರೂ.15 ಲಕ್ಷಗಳ ವರೆಗಿನ ಸಾಲಕ್ಕೆ ಅನ್ವಯವಾಗುತ್ತದೆ.
6. ರೈತನು ಪಡೆದ ಸಾಲವನ್ನು ಸಂಘವು ಗರಿಷ್ಟ 10 ವರ್ಷಗಳ ಅವಧಿಗೆ ನಿಗದಿಪಡಿಸಿದ ಗಡುವು ದಿನಾಂಕದೊಳಗೆ ಸಾಲ ಮರುಪಾವತಿಸಿದಲ್ಲಿ ಮಾತ್ರ ಬಡ್ಡಿ ಸಹಾಯಧನ ಲಭ್ಯವಾಗುತ್ತದೆ.
7. ಜಿಲ್ಲಾ ಸಹಕಾರ ಬ್ಯಾಂಕುಗಳು ಹಾಗೂ ಪಿಕಾರ್ಡ್ ಬ್ಯಾಂಕ್ ನಬಾರ್ಡ್‌ನಿಂದ ದೊರೆಯುವ ಪುನರ್ಧನ ಮತ್ತು ತಮ್ಮ ಬಂಡವಾಳದ ಲಭ್ಯತೆ ಆಧರಿಸಿ ರೈತರಿಗೆ ಸಾಲ ಮಂಜೂರು ಮಾಡಲಾಗುತ್ತದೆ.

(ರೂ ಕೋಟಿಗಳಲ್ಲಿ)

## ಪ್ಯಾಕ್ಸ್ ಗಳಲ್ಲಿ ಬ್ಯಾಂಕುಗಳಲ್ಲಿ ಅಲ್ಪಾವಧಿ ಕೃಷಿ ಸಾಲ ವಿತರಣೆ

| ಕ ಸಂ | ಜಿಲ್ಲೆಯ ಹೆಸರು | 2023-24 | | | | 2024-25 | | | | 2025-26 | | | |
|---|---|---|---|---|---|---|---|---|---|---|---|---|---|
| | | ಅಲ್ಪಾವಧಿ ಕೃಷಿ ಸಾಲ ವಿತರಣೆ | | ಮಧ್ಯಮಾವಧಿ ದೀರ್ಘಾವಧಿ ಕೃಷಿ ಸಾಲ | | ಅಲ್ಪಾವಧಿ ಕೃಷಿ ಸಾಲ ವಿತರಣೆ | | ಮಧ್ಯಮಾವಧಿ ದೀರ್ಘಾವಧಿ ಕೃಷಿ ಸಾಲ | | ಅಲ್ಪಾವಧಿ ಕೃಷಿ ಸಾಲ ವಿತರಣೆ | | ಮಧ್ಯಮಾವಧಿ ದೀರ್ಘಾವಧಿ ಕೃಷಿ ಸಾಲ | |
| | | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ |
| 1 | 2 | 2 | 3 | 4 | 5 | 6 | 7 | 8 | 9 | 10 | 11 | 12 | 13 |
| 1 | ಬೆಳಗಾವಿ | 391367 | 3060.42 | 812 | 32.26 | 488379 | 3475.66 | 268 | 12.74 | 482476 | 3806.48 | 466 | 24.31 |
| 2 | ವಿಜಯಪೂರ | 230660 | 1675.88 | 1403 | 43.76 | 236334 | 1823.68 | 901 | 40.45 | 238463 | 1885.24 | 1415 | 68.2 |
| 3 | ಬಾಗಲಕೋಟೆ | 217983 | 1351.58 | 321 | 68.56 | 221785 | 1375.06 | 1093 | 65.8 | 228179 | 1415.46 | 1598 | 100.48 |
| 4 | ಧಾರವಾಡ | 27623 | 222.52 | 203 | 11.61 | 27443 | 219.54 | 315 | 15.39 | 25785 | 214.95 | 201 | 11.69 |
| 5 | ಗದಗ | 28042 | 197.01 | 327 | 17.51 | 26996 | 186.42 | 421 | 19.22 | 26542 | 186.30 | 443 | 23.83 |
| 6 | ಹಾವೇರಿ | 35104 | 228.12 | 449 | 24.01 | 32998 | 228.00 | 784 | 35.89 | 34024 | 231.36 | 800 | 45.87 |
| 7 | ಉತ್ತರ ಕನ್ನಡ | 87917 | 929.75 | 8132 | 228.45 | 88485 | 1009.05 | 7234 | 226.32 | 89393 | 1052.96 | 7922 | 255.77 |
| 8 | ಬೀದರ | 158526 | 781.12 | 1180 | 15.22 | 150419 | 757.12 | 82 | 0.94 | 147381 | 732.53 | 150 | 1.38 |
| 9 | ಕಲಬುರಗಿ | 112597 | 546.04 | 6 | 0 | 113941 | 567.02 | 4 | 0.27 | 122895 | 572.45 | 78 | 3.39 |
| 10 | ಯಾದಗಿರ | 43221 | 183.82 | 0 | 0 | 42880 | 187.56 | 0 | 0 | 43022 | 192.79 | 2 | 0.16 |
| 11 | ರಾಯಚೂರು | 65263 | 411.75 | 101 | 6.63 | 72681 | 434.71 | 80 | 6.39 | 76809 | 456.55 | 60 | 3.42 |
| 12 | ಕೊಪ್ಪಳ | 35112 | 244.45 | 43 | 2.36 | 37312 | 242.47 | 22 | 2.43 | 38179 | 249.67 | 19 | 0.98 |
| 13 | ಬಳ್ಳಾರಿ | 39582 | 374.35 | 129 | 9.20 | 38677 | 367.96 | 169 | 10.60 | 39188 | 385.50 | 180 | 12.46 |
| 14 | ವಿಜಯನಗರ | 64495 | 628.02 | 112 | 7.90 | 63773 | 627.48 | 181 | 10.35 | 62553 | 634.21 | 376 | 14.53 |
| 15 | ಮೈಸೂರು | 70981 | 880.01 | 1267 | 33.32 | 71351 | 916.92 | 282 | 6.16 | 70655 | 925.85 | 480 | 9.35 |
| 16 | ಚಾಮರಾಜನಗರ | 28188 | 315.70 | 120 | 4.06 | 27720 | 326.59 | 0 | 0.00 | 27018 | 328.09 | 0 | 0.00 |
| 17 | ಮಂಡ್ಯ | 147352 | 979.90 | 1134 | 18.23 | 149130 | 1038.20 | 224 | 5.03 | 148460 | 1070.36 | 114 | 2.80 |
| 18 | ಹಾಸನ | 165043 | 1075.76 | 254 | 22.59 | 169282 | 1133.70 | 1200 | 143.15 | 169710 | 1188.76 | 1443 | 210.43 |
| 19 | ಚಿಕ್ಕಮಗಳೂರು | 57327 | 872.59 | 190 | 13.58 | 56915 | 858.24 | 207 | 14.26 | 54992 | 843.84 | 353 | 26.00 |
| 20 | ಕೊಡಗು | 36418 | 730.37 | 3561 | 87.80 | 36756 | 830.32 | 1408 | 77.66 | 32535 | 812.68 | 1164 | 52.53 |
| 21 | ದಕ್ಷಿಣ ಕನ್ನಡ | 92274 | 1778.75 | 9840 | 285.79 | 99593 | 1909.03 | 11244 | 373.62 | 103026 | 2002.24 | 12396 | 362.09 |
| 22 | ಉಡುಪಿ | 42948 | 629.84 | 2499 | 53.18 | 42155 | 638.01 | 2196 | 49.06 | 44183 | 652.64 | 2619 | 53.60 |
| 23 | ಬೆಂಗಳೂರು ನಗರ | 10023 | 124.36 | 28 | 1.23 | 9624 | 113.89 | 37 | 1.67 | 10123 | 145.20 | 42 | 1.95 |
| 24 | ಗ್ರಾಮಾಂತರ | 30260 | 236.24 | 201 | 11.24 | 29616 | 229.81 | 216 | 13.26 | 31676 | 253.89 | 251 | 16.94 |
| 25 | ಬೆಂಗಳೂರು ದಕ್ಷಿಣ | 64502 | 504.32 | 448 | 28.32 | 62304 | 486.30 | 502 | 31.14 | 66516 | 484.06 | 589 | 37.5 |
| 26 | ಕೋಲಾರ | 22610 | 291.34 | 435 | 8.74 | 21783 | 288.17 | 302 | 4.47 | 19005 | 255.18 | 13 | 0.08 |
| 27 | ಚಿಕ್ಕಬಳ್ಳಾಪುರ | 29280 | 364.48 | 95 | 3.73 | 26586 | 336.36 | 7 | 0.32 | 25607 | 325.27 | 0 | 0.00 |
| 28 | ತುಮಕೂರು | 143285 | 705.18 | 252 | 24.21 | 140958 | 701.87 | 199 | 20.85 | 140423 | 711.86 | 176 | 17.68 |
| 29 | ಚಿತ್ರದುರ್ಗ | 57921 | 480.78 | 924 | 58.54 | 56950 | 486.90 | 857 | 53.35 | 56263 | 496.02 | 619 | 35.78 |
| 30 | ದಾವಣಗೆರೆ | 99402 | 795.42 | 432 | 31.62 | 102159 | 850.42 | 357 | 26.48 | 104415 | 915.74 | 408 | 28.64 |
| 31 | ಶಿವಮೊಗ್ಗ | 81643 | 999.20 | 110 | 22.3 | 83074 | 1106.66 | 138 | 37.81 | 59768 | 1349.85 | 215 | 63.20 |
| | ಒಟ್ಟು | 2816749 | 22593.07 | 33784 | 1174.55 | 2828799 | 23773.11 | 30930 | 1307.07 | 2839064 | 24577.34 | 34532 | 1485.04 |

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ. ಕೇಶವ ಪ್ರಸಾದ ಎಸ್. ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 189 (291)**

**ಅನುಬಂಧ - 3**

| ಕ್ರ. ಸಂ. | ಜಿಲ್ಲೆ | ಒಟ್ಟು ಮಂಜೂರಾದ ಹುದ್ದೆಗಳು | ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ | ಖಾಲಿ ಇರುವ ಹುದ್ದೆಗಳ : ಸಂಖ್ಯೆ |
|---|---|---|---|---|
| 1 | ಬೆಂಗಳೂರು ಡಿಸಿಸಿ ಬ್ಯಾಂಕ್ | 375 | 307 | 68 |
| 2 | ಕೋಲಾರ ಮತ್ತು ಚಿಕ್ಕಬಳ್ಳಾಪುರ ಡಿಸಿಸಿ ಬ್ಯಾಂಕ್ | 216 | 102 | 114 |
| 3 | ತುಮಕೂರು ಡಿಸಿಸಿ ಬ್ಯಾಂಕ್ | 435 | 422 | 13 |
| 4 | ಚಿತ್ರದುರ್ಗ ಡಿಸಿಸಿ ಬ್ಯಾಂಕ್ | 159 | 146 | 13 |
| 5 | ದಾವಣಗೆರೆ ಡಿಸಿಸಿ ಬ್ಯಾಂಕ್ | 220 | 169 | 51 |
| 6 | ಶಿವಮೊಗ್ಗ ಡಿಸಿಸಿ ಬ್ಯಾಂಕ್ | 203 | 263 | 203 |
| | **ಒಟ್ಟು** | **1608** | **1146** | **462** |
| 7 | ಮೈಸೂರು ಮತ್ತು ಚಾಮರಾಜನಗರ ಡಿಸಿಸಿಬಿ | 294 | 239 | 55 |
| 8 | ಮಂಡ್ಯ ಡಿಸಿಸಿ ಬ್ಯಾಂಕ್ | 538 | 497 | 41 |
| 9 | ಹಾಸನ ಡಿಸಿಸಿ ಬ್ಯಾಂಕ್ | 378 | 183 | 195 |
| 10 | ಚಿಕ್ಕಮಗಳೂರು ಡಿಸಿಸಿ ಬ್ಯಾಂಕ್ | 373 | 137 | 236 |
| 11 | ಕೊಡಗು ಡಿಸಿಸಿ ಬ್ಯಾಂಕ್ | 280 | 165 | 115 |
| 12 | ದಕ್ಷಿಣ ಕನ್ನಡ ಡಿಸಿಸಿ ಬ್ಯಾಂಕ್ | 991 | 893 | 98 |
| | **ಒಟ್ಟು** | **2854** | **2114** | **740** |
| 13 | ಬೆಳಗಾವಿ ಡಿಸಿಸಿ ಬ್ಯಾಂಕ್ | 942 | 694 | 248 |
| 14 | ವಿಜಯಪುರ ಡಿಸಿಸಿ ಬ್ಯಾಂಕ್ | 540 | 503 | 37 |
| 15 | ಬಾಗಲಕೋಟೆ ಡಿಸಿಸಿ ಬ್ಯಾಂಕ್ | 581 | 543 | 38 |
| 16 | ಕೆ.ಸಿ.ಸಿ ಬ್ಯಾಂಕ್, ಧಾರವಾಡ | 461 | 372 | 89 |
| 17 | ಕೆನರಾ ಡಿಸಿಸಿ ಬ್ಯಾಂಕ್, ಶಿರಸಿ | 525 | 385 | 140 |
| | **ಒಟ್ಟು** | **3049** | **2497** | **552** |
| 18 | ಬೀದರ್ ಡಿಸಿಸಿ ಬ್ಯಾಂಕ್ | 398 | 287 | 111 |
| 19 | ಕಲಬುರಗಿ ಡಿಸಿಸಿ ಬ್ಯಾಂಕ್ | 129 | 105 | 24 |
| 20 | ರಾಯಚೂರು ಡಿಸಿಸಿ ಬ್ಯಾಂಕ್ | 275 | 226 | 49 |
| 21 | ಬಳ್ಳಾರಿ ಡಿಸಿಸಿ ಬ್ಯಾಂಕ್ | 373 | 278 | 95 |
| | **ಒಟ್ಟು** | **1175** | **896** | **279** |
| | **ಒಟ್ಟು ಕ್ರೋಢೀಕೃತ** | **8686** | **6653** | **2033** |

ಸಹಕಾರ ಸಂಘಗಳ ಅಪರ ನಿಬಂಧಕರು,
(ಪತ್ತು)